ಮರಾಠಿ ಮೂಲ: ಶ್ರೀಕೃಷ್ಣ ಜ. ಜೋಶಿ
**ಕನ್ನಡಕ್ಕೆ: ಪ್ರಕಾಶ ಪರ್ವತೀಕರ**

# ವಾಸ್ತವ

ನಿಶಿಕಾಂತ, ಸ್ಕೂಟರ್ ನಿಲ್ಲಿಸಿ, ಕೆಳಗೆ ಇಳಿದು ಎದುರಿಗಿನ ಭವ್ಯ ಬಂಗ್ಲೆಯ ಕಡೆಗೆ ಪ್ರತಿಸಲದಂತೆ ನೋಡಿದ. ಗಾಜಿನ ಸ್ಲೈಡಿಂಗ್ ಬಾಗಿಲು ಇದ್ದುದರಿಂದ ಮೊದಲನೇ ಅಂತಸ್ತಿನಲ್ಲಿ ಕೋಣೆಯೊಳಗೆ ನಡೆಯುತ್ತಿರುವ ಚಟುವಟಿಕೆಗಳು ಕಾಣಿಸತೊಡಗಿದವು. ರೇವತಿ, ಜರಿಯ ಕಸೂತಿ ಕೆಲಸ ಮಾಡಿದ ದಟ್ಟ ನೀಲಿ ಬಣ್ಣದ ಸೀರೆ ಉಟ್ಟಿಕೊಂಡಿದ್ದಳು. ವಿದ್ಯುತ್ ಬೆಳಕಿನಲ್ಲಿ ಸೀರೆ ಫಳ ಫಳ ಹೊಳೆಯುತ್ತಿತ್ತು. ಆತನ ನೆಚ್ಚಿನ ಬಣ್ಣವಲ್ಲವೇ ಅದು? ಅವನ ಕಣ್ಣಲ್ಲಿ ಮಿಂಚು ಹೊಳೆಯಿತು. ಗಣಪುಲೆಯ ಜೊತೆ ರೇವತಿಯ ಮದುವೆ ಆದ ದಿನದಿಂದ ನಿಶಿಕಾಂತ ಕಳವಳಗೊಂಡಿದ್ದ. ಮಾನಸಿಕವಾಗಿ ಬಳಲಿದ್ದ. ಇಂದು ರೇವತಿಯನ್ನು ನೋಡಿದ ಕೂಡಲೆ ಆತನಲ್ಲಿ ಹುದುಗಿದ್ದ ನೋವುಗಳು ದೂರವಾದವು. ಹರುಷದಿಂದ ಮನ ತುಂಬಿಕೊಂಡಿತು. ಆನಂದತುಂದಿಲನಾಗಿ ಮೆಟ್ಟಿಲನ್ನು ಏರಿ ಮೇಲೆ ಹೋದ.

ದಿವಾನಖಾನೆಯಲ್ಲಿ ರೇವತಿಯ ತಂದೆ ಕುಳಿತಿದ್ದರು. ಆಕೆಯ ತಾಯಿ ಮಗ್ಗಲಿಗೆ ನಿಂತಿದ್ದಳು. ತನ್ನ ಬರುವಿಕೆಯಿಂದ ಅವರಿಗೆ ಅಸಮಾಧಾನ ಆಗಿರಬಹುದು ಎಂದು ಶಂಕೆ ಅವನಲ್ಲಿ ಮೂಡಿ, ಅವರ ಕಡೆಗೆ ನೋಡಿದ. ಆದರೆ ಅವರಿಬ್ಬರು





ಎಸ್.ವಿ. ಹೂಗಾರ